**ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 18-06-1969.**

(ओम शान्ति,  बापदादा. अव्यक्त मुरली 18-06-1969)

***ಮರು ಜೀವಾ ಜನ್ಮದ ಗುರುತುಗಳು***

(ಪಾರ್ಟಿಗಳೊಂದಿಗೆ)(पार्टियों के साथ)

1. ಪಾಠ ಶಾಲೆಗೆ ಹೋಗುತ್ತಿರಿ, ಅಲ್ಲಿಯ ಮೊದಲ ಪಾಠ ಯಾವುದು? ತಮ್ಮನ್ನು (ಜೀವಂತ ಶವ) ಮರಜೀವಾ ಎಂದರೆ ತಮ್ಮ ದೇಹದಿಂದ, ಮಿತ್ರ ಸಂಬಂಧಿಗಳಿಂದ ಹಳೆಯ ಜಗತ್ತಿನಿಂದ ಮರಜೀವಾ, ಈ ಮೊದಲ ಪಾಠ ಪಕ್ಕಾ ಆಗಿದೆಯಾ? (ಸಂಸ್ಕಾರಗಳಿಂದ ಮರಜೀವಾ ಆಗಿಲ್ಲ) ಯಾರಾದರೂ ಶರೀರ ಬಿಟ್ಟರೆ ಹಳೆಯ ಸಂಸ್ಕಾರಗಳೂ ನಾಶವಾಗುತ್ತವೆ. ಇಲ್ಲಿಯೂ ಹಳೆಯ ಸಂಸ್ಕಾರಗಳು ಏಕೆ ನೆನಪಿಗೆ ಬರಬೇಕು. ಜನ್ಮವೇ ಬೇರೆಯದಾದಾಗ ಹಳೆಯ ಸಮಾಪ್ತಿಯಾಗಬೇಕು. ಮಠಜೀವಾ ಆಗುವುದು ಮೊದಲ ಪಾಠವಾಗಿದೆ, ಇದನ್ನು ಮಾತುಗಳು ಪಕ್ಕಾ ಮಾಡಿಕೊಳ್ಳಬೇಕು. ಹಳೆಯ ಸಂಸ್ಕಾರಗಳು ನಮ್ಮದಲ್ಲ, ಬೇರೆ ಯಾರದೋ, ಸಂಸ್ಕಾರಗಳಂತೆ ಅನಿಸಬೇಕು. ಮೊದಲು ಶೂದ್ರರದಾಗಿದ್ದವು ಈಗ ಬ್ರಾಹ್ಮಣರದಾಗಿವೆ. ಹಳೆಯ ಶೂದ್ರರ ಸಂಸ್ಕಾರಗಳು ಇರಬಾರದು. ಬೇರೆಯವರ ಸಂಸ್ಕಾರಗಳನ್ನು ಏಕೆ ನಿಮ್ಮದನ್ನಾಗಿಸಿ ಕೊಳ್ಳುತ್ತೀರಿ? ಬೇರೆಯವರ ವಸ್ತುಗಳನ್ನು ತಮ್ಮದಾಗಿಸಿಕೊಳ್ಳುವವರನ್ನು ಅವರನ್ನು ಏನೆಂದು ಹೇಳುತ್ತಾರೆ? ಕಳ್ಳ ಈ ಕಳ್ಳತನವನ್ನು ಏಕೆ ಮಾಡುತ್ತೀರಿ? ಇದಂತೂ ಶೂದ್ರರ ಸಂಸ್ಕಾರವಾಗಿದೆ ಬ್ರಾಹ್ಮಣರದಲ್ಲ. ಶೂದ್ರರ ವಸ್ತುಗಳನ್ನು ಬ್ರಾಹ್ಮಣರು ಏಕೆ ಸ್ವೀಕಾರ ಮಾಡುತ್ತೀರಿ? ಅಸ್ಪೃಶ್ಯರಿಗೆ ಬಟ್ಟೆ ತಾಗಿದರೆ ಸ್ನಾನ ಮಾಡುತ್ತಾರೆ. ಆದ್ದರಿಂದ ಶೂದ್ರರ ಸಂಸ್ಕಾರಗಳು ಬ್ರಾಹ್ಮಣರಿಗೆ ತಾಗಿದರೆ ಏನು ಮಾಡಬೇಕು? ಅದಕ್ಕಾಗಿ ಪುರುಷಾರ್ಥ ಮಾಡಬೇಕು. ಹೇಗೆ ಹೊಲಸನ್ನು ಮುಟ್ಟುವುದಿಲ್ಲವೋ ಹಾಗೆಯೇ ಹಳೆಯ ಸಂಸ್ಕಾರಗಳಿಂದ ರಕ್ಷಿಸಿಕೊಳ್ಳಬೇಕು. ಮುಟ್ಟಬಾರದು. ನೀವು ಇಷ್ಟು ಗಮನ ಕೊಟ್ಟಾಗ ಬೇರೆಯವರ ಗಮನ ಸೆಳೆಯುವಿರಿ.

2. ಸೇವೆಯ ಸಫಲತೆಗೆ ಮುಖ್ಯ ಗುಣ ಯಾವುದು? ನಮ್ರತೆ. ಎಷ್ಟು ನಮ್ರತೆಯೋ ಅಷ್ಟು ಸಫಲತೆ, ನಿಮಿತ್ತ ಎಂದು ತಿಳಿಯುವುದರಿಂದ ನಮ್ರತೆ ಬರುತ್ತದೆ, ನಿಮಿತ್ತ ಎಂದು ತಿಳಿದು ಸೇವೆ ಮಾಡಿ. ನಮ್ರತೆಯ ಗುಣದಿಂದ ಎಲ್ಲರೂ ತಮಗೆ ನಮನ ಮಾಡುವರು. ಯಾರು ಸ್ವಯಂ ಬಾಗುತ್ತಾರೋ ಅವರ ಎದುರಿಗೆ ಎಲ್ಲರೂ ಬಾಗುತ್ತಾರೆ, ನಿಮಿತ್ತ ಎಂದು ತಿಳಿದು ಕಾರ್ಯ ಮಾಡಿ. ಹೇಗೆ ತಂದೆ ಶರೀರ ಆಧಾರವನ್ನು ನಿಮಿತ್ತ ಮಾತ್ರ ತೆಗೆದುಕೊಳ್ಳುತ್ತಾರೋ ಹಾಗೆಯೇ ತಾವು ನಿಮಿತ್ತ ಮಾತ್ರ ಶರೀರದ ಆಧಾರ ತೆಗೆದುಕೊಂಡಿದ್ದೇವೆ ಎಂದು ತಿಳಿದುಕೊಳ್ಳಿ. ಒಂದು ಶರೀರವನ್ನು ನಿಮಿತ್ತ ಮಾತ್ರ ಎಂದು ತಿಳಿದುಕೊಳ್ಳುವುದು ಮತ್ತು ಎರಡನೆಯದು ಸೇವೆಯಲ್ಲಿ ತಮ್ಮನ್ನು ತಾವು ನಿಮಿತ್ತ ಎಂದು ತಿಳಿದುಕೊಳ್ಳುವುದು. ಆಗ ನಮ್ರತೆ ಬರುವುದು, ಆಗ ನೋಡಿ ಸಫಲತೆ ತಮ್ಮ ಮುಂದಿರುವುದು, ಹೇಗೆ ಬಾಪದಾದಾ ಅಲ್ಪಕಾಲಕ್ಕೆ ದೇಹದಲ್ಲಿ ಬರುತ್ತಾರೋ ಹಾಗೆಯೇ ದೇಹವನ್ನು ನಿಮಿತ್ತ ಆಧಾರವೆಂದು ತಿಳಿಯಿರಿ, ಬಾಪದಾದಾ ಅವರಿಗೆ ದೇಹದಲ್ಲಿ ಮೋಹವಿದೆಯೇ? ಆಧಾರವೆಂದು ತಿಳಿದಾಗ ಅಧೀನರಾಗುವುದಿಲ್ಲ. ಈಗ ದೇಹಕ್ಕೆ ಅಧೀನರಾಗುತ್ತಿರಿ ನಂತರ ದೇಹವನ್ನು ಅಧೀನ ಮಾಡಿಕೊಳ್ಳುವಿರಿ.

3. ದೃಷ್ಟಿಯಿಂದ ಸೃಷ್ಟಿಯೆಂಬ ಗಾಯನವಿದೆ. ಯಾವ ಸೃಷ್ಟಿ ಯಾಗುತ್ತದೆ ಹಾಗೂ ಯಾವಾಗ ಆಗುತ್ತದೆ? ದೃಷ್ಟಿ ಮತ್ತು ಸೃಷ್ಟಿಯದೇ ಏಕೆ ಗಾಯನವಿದೆ, ಮುಖದಗಾಯನ ಏಕಿಲ್ಲ? ಕೆಲಸದಲ್ಲಿ ಮೊದಲು ಯಾವುದನ್ನು ಬದಲಿ ಮಾಡುತ್ತಾರೆ ? ಯಾವ ಮೊದಲ ಪಾಠವನ್ನು ಕಲಿಸುತ್ತಾರೆ? ಸಹೋದರತೆಯ ದೃಷ್ಟಿಯಿಂದ ನೋಡಿ, ಸಹೋದರತೆಯ ದೃಷ್ಟಿ ಎಂದರೆ ಮೊದಲು ದೃಷ್ಟಿಯನ್ನು ಬದಲಿಸಿಕೊಂಡರೆ

ಎಲ್ಲ ಮಾತುಗಳು ಬದಲಾಯಿಸುತ್ತವೆ. ಆದ್ದರಿಂದ ದೃಷ್ಟಿಯಿಂದ ಸೃಷ್ಟಿಯಾಗುತ್ತದೆ ಎಂಬ ಗಾಯನವಿದೆ. ಯಾವಾಗ ಆತ್ಮವನ್ನು ನೋಡುತ್ತೇವೆಯೋ ಆಗ ಈ ಸೃಷ್ಟಿ ಹಳೆಯದೆಂದು ಕಾಣುತ್ತದೆ. ಪುರುಷಾರ್ಥವೂ ಮುಖ್ಯವಾಗಿ ದೃಷ್ಟಿ ಬದಲಿಸುವುದೇ ಆಗಿದೆ. ಯಾವಾಗ ಈ ದೃಷ್ಟಿ ಬದಲಾಗುತ್ತದೋ ಆಗ ಸ್ಥಿತಿ ಮತ್ತು ಪರಿಸ್ಥಿತಿ ಬದಲಾಯಿಸುತ್ತದೆ. ದೃಷ್ಟಿ ಬದಲಾವಣೆಯಿಂದ ಗುಣ ಮತ್ತು ಕರ್ಮ ತಮ್ಮಿಂದ ತಾವೇ ಬದಲಾಯಿಸುತ್ತವೆ. ಈ ಆತ್ಮಿಕ ದೃಷ್ಟಿ ಸಹಜವಾಗಬೇಕು.

4. ಯಾರು ಸಂಗಮಯುಗದಲ್ಲಿ ತಮ್ಮ ರಾಜರಾಗುತ್ತಾರೋ ಅವರು ಪ್ರಜೆಗಳಿಗೂ ರಾಜರಾಗುತ್ತಾರೆ. ಯಾರು ಇಲ್ಲಿ ತಮ್ಮ ರಾಜರಲ್ಲವೋ ಅವರು ಅಲ್ಲಿಯೂ ಪ್ರಜೆಗಳ ರಾಜರಾಗುವುದಿಲ್ಲ. ಸಂಗಮಯುಗದಲ್ಲಿಯೇ ಸಂಸ್ಕಾರಗಳ ಬೀಜ ಬಿತ್ತಲಾಗುತ್ತದೆ. ಇಲ್ಲಿಯ ಬೀಜವಿಲ್ಲದೇ ಭವಿಷ್ಯದ ವೃಕ್ಷ ಬರುವುದಿಲ್ಲ. ಇಲ್ಲಿ ಬೀಜ ಹಾಕದೇ ಹೂ ಎಲ್ಲಿಂದ ಬರಬೇಕು? ಇಲ್ಲಿ ತಮ್ಮ ರಾಜರಾಗುವುದರಿಂದ ಏನಾಗುವುದು? ತಮ್ಮನ್ನು ಅಧಿಕಾರಿಗಳೆಂದು ತಿಳಿಯುವಿರಿ, ಅಧಿಕಾರಿಗಳಾಗಲು ಉದಾರಚಿತ್ತದ ವಿಶೇಷ ಗುಣವಿರಬೇಕು. ಎಷ್ಟು ಉದಾರಚಿತ್ತರೋ ಅಷ್ಟು ಅಧಿಕಾರಿಗಳಾಗುವಿರಿ, ಬ್ರಾಹ್ಮಣರ ಮುಖ್ಯ ಕರ್ತವ್ಯವೇ ಆಗಿದೆ ಓದುವುದು ಮತ್ತು ಓದಿಸುವುದು. ಇದರಲ್ಲಿ ವ್ಯಸ್ತರಾದರೆ ಅನ್ಯ ಮಾತುಗಳಲ್ಲಿ ಬುದ್ಧಿ ಹೋಗುವುದಿಲ್ಲ. ಆದ್ದರಿಂದ ತಮ್ಮನ್ನು ತಾವು ಓದಲು ಓದಿಸಲು ವ್ಯಸ್ತ ಮಾಡಿಕೊಳ್ಳಿ, ಇತ್ತೀಚೆಗೆ ಬಾಪದಾದಾ ಅವರು ಮನಸ್ಸಿನ ವೃತ್ತಿಯಿಂದ ಮತ್ತು ಅವ್ಯಕ್ತ ದೃಷ್ಟಿಯಿಂದ ಸೇವೆ ಮಾಡಬಹುದು. ತಮ್ಮ ವೃತ್ತಿ - ದೃಷ್ಟಿ ಯಿಂದ ಸೇವೆ ಮಾಡಲು ಯಾವ ಬಂಧನವಿಲ್ಲ. ಯಾವ ಮಾತುಗಳಲ್ಲಿ ಸ್ವತಂತ್ರರಾಗಿರುವಿರೋ ಆ ಸೇವೆಯನ್ನು ಮಾಡಬೇಕು.

ಅವ್ಯಕ್ತ ಮುರಳಿ 18-06-1969.

***ಮರುಜೀವಾ ಜನ್ಮದ ಗುರುತುಗಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ-ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1.ನಾನು ದೇಹದೊಂದಿಗೆ, ಮಿತ್ರ ಸಂಬಂಧಿಕರೊಂದಿಗೆ, ಹಳೆಯ ಪ್ರಪಂಚದೊಂದಿಗೆ, ಸಂಸ್ಕಾರಗಳೊಂದಿಗೆ ಮರುಜೀವಿಯಾಗಿದ್ದೇನೆ.

2. ನಾನು ವಿಶೇಷ ಗಮನದಿಂದ ಹಳೆಯ ಶೂದ್ರ ಸಂಸ್ಕಾರಗಳಿಂದ ನನ್ನನ್ನು ನಾನು ರಕ್ಷಿಸಿಕೊಂಡು ಇತರರಿಗೆ ನೆನಪು ಮಾಡಿಸುತ್ತಿದ್ದೇನೆ.

3. ನಾನು ಶರೀರಕ್ಕೆ ನಿಮಿತ್ತವಾಗಿ ಮತ್ತು ಸೇವೆಗೆ ನಿಮಿತ್ತವಾಗಿ ಭಾವಿಸಿ, ನಮ್ರತೆ ಎಂಬ ದೈವಿ ಗುಣವನ್ನು ಧಾರಣೆ ಮಾಡಿ ಸೇವೆಯಲ್ಲಿ ಸಫಲತೆಯನ್ನು ಹೊಂದಿದ್ದೇನೆ.

4. ನಾನು ಬಾಪ್ ದಾದಾರವರನ್ನು ಅನುಸರಿಸುತ್ತಾ.. ದೇಹವನ್ನು ನಿಮಿತ್ತ ಆಧಾರವಾಗಿ ಭಾವಿಸುವ ಅಧಿಕಾರಿ.

5. ನಾನು ನನ್ನ ದೃಷ್ಟಿಯಿಂದ ಸೃಷ್ಟಿಯನ್ನು ಪರಿವರ್ತಿಸುವ ಮುಖ್ಯ ಪುರುಷಾರ್ಥಿ.

6. ನಾನು ವಿಶ್ವದಲ್ಲಿ ಎಲ್ಲರನ್ನೂ ಆತ್ಮಿಕ ಸಹೋದರ ದೃಷ್ಟಿಯಿಂದ ನೋಡುತ್ತಿದ್ದೇನೆ.

7. ನಾನು ನನ್ನ ದೃಷ್ಟಿಯಿಂದ ಸ್ಥಿತಿ, ಪರಿಸ್ಥಿತಿ, ಗುಣ ಮತ್ತು ಕರ್ಮವನ್ನು ಪರಿವರ್ತಿಸಿ ಆತ್ಮಿಕ ದೃಷ್ಟಿಯನ್ನು ಸಹಜವಾಗಿ ಹೊಂದಿದ್ದೇನೆ.

8. ನಾನು ಸಂಗಮ ಯುಗದಲ್ಲಿ ಸ್ವಯಂನ ಮೇಲೆ ರಾಜ್ಯವನ್ನು ಮಾಡಿ ಸತ್ಯಯುಗದಲ್ಲಿ ಪ್ರಜೆಗಳಿಗೆ ರಾಜನಾಗಿದ್ದೇನೆ.

9. ಸಂಗಮ ಯುಗದಲ್ಲಿಯೇ ಎಲ್ಲಾ ಸಂಸ್ಕಾರಗಳ ಬೀಜ ಬೀಳುತ್ತದೆ. ಆ ಬೀಜದಿಂದ ನನ್ನ ಭವಿಷ್ಯ ವೃಕ್ಷ ಬರುತ್ತದೆ ಎಂಬ ಅರಿವಿನಿಂದ ನಾನು ಪುರುಷಾರ್ಥ ಮಾಡುತ್ತಿದ್ದೇನೆ.

10. ನಾನು ಉದಾರ ಚಿತ್ತ ಎಂಬ ದೈವಿ ಗುಣವನ್ನು ಸಂಪೂರ್ಣವಾಗಿ ಧಾರಣೆ ಮಾಡಿರುವ ಅಧಿಕಾರಿ.

11. ನಾನು ಬ್ರಾಹ್ಮಣರ ಕರ್ತವ್ಯವಾದ ಓದುವುದು ಮತ್ತು ಓದಿಸುವುದರಲ್ಲಿ ಬುದ್ಧಿಯನ್ನು ವ್ಯಸ್ತವಾಗಿಟ್ಟು ವ್ಯರ್ಥವನ್ನು ಸಮರ್ಥ ಮಾಡಿದ್ದೇನೆ.

12. ನಾನು ಮನಸ್ಸಿನ ವೃತ್ತಿ, ಅವ್ಯಕ್ತ ದೃಷ್ಟಿಯಿಂದ ಸೇವೆ ಮಾಡುವ ಬಂಧನ ಮುಕ್ತ ಆತ್ಮ.